ಕರೆದುಕೊಂಡು ಹೋದ ವ್ಯಕ್ತಿ ಮತ್ತೆ ವಾಪಸ್ ಆಲ್ಲಿಂದ ಬರಲಿಲ್ಲ. ಮತ್ತೆ ಸರ್ಕಾರವೂ ಒಪ್ಪಿಕೊಂಡಿದೆ ಪೆಟ್ಟು ಬಿದ್ದೇ ಸತ್ತಿದ್ದಾನೆ ಎಂದು. ಅಂದಮೇಲೆ ಅವರಿಗೆ ಪರಿಹಾರ ಕೊಡುವುದಕ್ಕೆ ಸರ್ಕಾರ ಹಿಂದುಮುಂದೆ ಯೋಚನೆ ಮಾಡಬಾರದು. ಅದು ತೀರಾ ಬಡ ಕುಟುಂಬವಿರುವುದರಿಂದ ದಯಮಾಡಿ ಮಾನ್ಯ ಮಂತ್ರಿಗಳು ದೊಡ್ಡಮನಸ್ಸು ಮಾಡಿ ಯಾವುದಾದರೂ ನಿಧಿಯಲ್ಲಿ, ಅನೇಕ ನಿಧಿಗಳಿವೆ, ಯಾವುದಾದರೂ ನಿಧಿಯಲ್ಲಿ ಈ ಕುಟುಂಬಕ್ಕೆ ಪರಿಹಾರ ಕೊಡಭೇಕೆಂದು ತಮ್ಮ ಮುಖಾಂತರ ಅವರನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಲಾಕಪ್ ಡೆತ್‌ನಲ್ಲಿ ಸತ್ತಿದ್ದಾನೆ ಎಂದು ಕನ್‌ಫರ್ಮ್ ಮಾಡುವುದಕ್ಕೆ ನನ್ನ ಕೈಯಲ್ಲಿ ಆಗುವುದಿಲ್ಲ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರವನ್ನು ಕೊಟ್ಟಿದ್ದೇನೆ. ಅದು ಯಾವರೀತಿ ಸತ್ತಿದ್ದಾನೆ, ಹೇಗೆ ಸತ್ತಿದ್ದಾನೆ, ಪೋಲೀಸರ ಹೊಡೆತದಿಂದ ಸತ್ತಿದ್ದಾನೆಯೇ ಎಂಬುದನ್ನು ವಿಚಾರಣೆ ಮಾಡುವುದಕ್ಕೆ ನಾವು ಸಿ.ಒ.ಡಿ.ಗೆ ಇದನ್ನು ಕೊಟ್ಟಿದ್ದೇವೆ. ಪರಿಹಾರದ ಬಗ್ಗೆ ಈಗಿರತಕ್ಕ ಕಾನೂನಿನಲ್ಲಿ ಅವಕಾಶ ಇಲ್ಲ. ಕೊಡಲಿಕ್ಕೆ ಬರುವುದಿಲ್ಲ. ಆದರೆ ಈ ಸದನಕ್ಕೆ ತಮ್ಮ ಮೂಲಕ ಭರವಸೆ ಕೊಡುತ್ತಿದ್ದೇನೆ ಈ ರೀತಿ ಪೋಲೀಸ್ ಕಸ್ಟಡಿಯಲ್ಲಿ ಸಾಮಾನ್ಯ ಜನರು ಯಾವುದಾದರೂ ಸಂದರ್ಭದಲ್ಲಿ ಹೋಗಿ ಅವರಿಗೆ ಅನ್ಯಾಯವಾಗಿ ಅವರು ಸತ್ತರೆ ಅವರ ಕುಟುಂಬವರ್ಗದವರಿಗೆ ಪರಿಹಾರ ಕೊಡುವ ವಿಚಾರದಲ್ಲಿ ನಾನು ನಿಮಗೆ ಮಾತು ಕೊಡುತ್ತಿದ್ದೇನೆ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಈಗ ಮಾನ್ಯ ಮಂತ್ರಿಗಳು ಲಾಕಪ್ ಡೆತ್ ಸಾವು ಎಂದು ಎರಡು ಹೇಳಿದ್ದಾರೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಈ ಲಾಕಪ್‌ನಲ್ಲಿ ಸಾವಿನ ಪ್ರಕರಣ ಆಗಾಗ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ಹಿಂದೆ ಒಂದು ಸಾರಿ ಹೇಳಿಕೆ ಕೊಟ್ಟಿರುವುದನ್ನು ನೋಡಿದ್ದೆ. ಲಾಕಪ್ ಸಾವಿಗೆ ಹೊಣೆಗಾರರನ್ನಾಗಿ ಆ ಪೋಲೀಸ್ ಸ್ಟೇಷನ್ನಿನ ಸಬ್-ಇನ್‌ಸ್ಪೆಕ್ಟರನ್ನು ಮಾಡುತ್ತೇವೆ ಎಂಬ ಮಾತನ್ನು ಹೊರಗಡೆ ಹೇಳಿಕೆ ಕೊಟ್ಟಿದ್ದರು. ಇದರ ಬಗ್ಗೆ ಸರ್ಕಾರದ ನೀತಿ ಏನು? ಲಾಕಪ್‌ನಲ್ಲಿ ಆಗಾಗ ಸಾಯುತ್ತಿದ್ದಾರೆ. ಸುಮ್ಮನೆ ಹೀಗೆ ಹೇಳಿಬಿಟ್ಟು ನಾವು ಅವರಿಗೆ ಪರಿಹಾರ ಕೊಡುತ್ತೇವೆ ಹಾಗಿದ್ದರೆ ಎಂದು ಹೇಳಿದರೆ ಆಗುವುದಿಲ್ಲ. ಲಾಕಪ್‌ನಲ್ಲಿ ಸಾಯುವುದನ್ನು ನಿಲ್ಲಿಸುವುದಕ್ಕೆ ಮತ್ತು ಸತ್ತಿರುವುದಕ್ಕೆ ಯಾರನ್ನು ಜವಾಬ್ದಾರಿ ಮಾಡುತ್ತೀರಿ ಎಂಬುದನ್ನು ಸ್ಪಷ್ಟಪಡಿಸಬೇಕು. ನಿಮ್ಮ ಹೇಳಿಕೆಯನ್ನು ನೋಡಿದ್ದೇನೆ ನಾನು.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಸಂಬಂಧಪಟ್ಟ ಠಾಣಾಧಿಕಾರಿಗಳು, ಪೋಲೀಸ್ ಸ್ಟೇಷನ್ ಆಫೀಸರ್ಸ್ ಯಾರು ಇರುತ್ತಾರೆ ಅವರದು ಜವಾಬ್ದಾರಿ ಇರುತ್ತದೆ ಇಂಥ ವಿಚಾರಗಳಲ್ಲಿ. ಪರಿಹಾರದ ಬಗ್ಗೆ ಮತ್ತೊಮ್ಮೆ ಹೇಳುತ್ತಿದ್ದೇನೆ ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 5ನೇ ಸೆಪ್ಟೆಂಬರ್ 1995ರಲ್ಲಿ 15ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 95ಪ್ರಶ್ನೆಗಳ ಪೈಕಿ 86 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ವಿಷಯ:- ಶಿವಮೊಗ್ಗದಲ್ಲಿರುವ ಪೋಲೀಸ್ ಸ್ಟೇಷನ್ ವ್ಯಾಪ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1555 (2192)